

॥ ಶ್ರೀ ನೀಲಕಂಠೇಶ್ವರ ಸ್ವಾಮಿ ಪ್ರಸನ್ನ ॥

# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ.)


ನಂ. 5, 'ಸಾಕಮ್ಮ ಭವನ', ದ್ವಾರಕಾನಾಥ್ ರಸ್ತೆ, ಹೊಸ ಪ್ರೌಢಶಾಲೆ ರಸ್ತೆ,

ವಿಶ್ವೇಶ್ವರಪುರ, ಬೆಂಗಳೂರು – 560 004. ದೂರವಾಣಿ : 080 – 22425746

E-mail : ksksanga@gmail.com www.ksksangha.com




## ಕೇಂದ್ರ ಸಂಘದ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಕೋರುವ ಅರ್ಜಿ

ಅರ್ಜಿ ಬೆಲೆ ರೂ. 50/-

ಗೆ,
ಅಧ್ಯಕ್ಷರು
ವಿದ್ಯಾರ್ಥಿ ನಿಲಯದ ಸಮಿತಿ
ನಂ. 5, ಹೊಸ ಪ್ರೌಢಶಾಲೆ ರಸ್ತೆ,
ವಿಶ್ವೇಶ್ವರಪುರ,
ಬೆಂಗಳೂರು – 560 004.

ಮಾನ್ಯರೇ,...

ನಾನು ತಮ್ಮ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಯಾಗಿರಲು ಇಚ್ಛೆಯುಳ್ಳವನಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನ ಮನವಿಯನ್ನು ಅಂಗೀಕರಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ವಿಧ್ಯಾರ್ಥಿ ನಿಲಯದ ಎಲ್ಲಾ ನಿಯಮಗಳಿಗೆ ಬದ್ಧನಾಗಿರುತ್ತೇನೆಂದು ಈ ಮೂಲಕ ಒಪ್ಪಿ ಸಹಿ ಮಾಡಿರುತ್ತೇನೆ.

ಮೊ. ಸಂಖ್ಯೆ :

| | |
|---|---|
| 1. ವಿದ್ಯಾರ್ಥಿಯ ಹೆಸರು ಮತ್ತು ವಿಳಾಸ | |
| 2. ವಯಸ್ಸು ಮತ್ತು ಹುಟ್ಟಿದ ದಿನಾಂಕ | |
| 3. ವಿದ್ಯಾರ್ಥಿಯ ತಂದೆ / ತಾಯಿ / ಪೋಷಕರ ಹೆಸರು ಮತ್ತು ವಿಳಾಸ | |
| 4. ತಂದೆ / ತಾಯಿ / ಪೋಷಕರ ಉದ್ಯೋಗ ಮತ್ತು ವಾರ್ಷಿಕ ವರಮಾನ. | |
| 5. ಕಳೆದ ಸಾಲಿನಲ್ಲಿ ಓದುತ್ತಿದ್ದ ಶಾಲೆಯ / ಕಾಲೇಜಿನ ಹೆಸರು ತರಗತಿ, ಅಂತಿಮ ತರಗತಿಯ ಪರೀಕ್ಷೆಯ ಧೃಡೀಕರಿಸಲ್ಪಟ್ಟ ಅಂಕಪಟ್ಟಿಯ ಪ್ರತಿಯನ್ನು ಲಗತ್ತಿಸಿರಬೇಕು. | |
| 6. ಚಾಲ್ತಿ ಸಾಲಿನಲ್ಲಿ ಓದುತ್ತಿರುವ ಶಾಲೆ/ಕಾಲೇಜು ಮತ್ತು ತರಗತಿಯ ವಿವರಗಳು (ಶಾಲಾ ಪ್ರಾಂಶುಪಾಲರಿಂದ ಪಡೆದ ಅಭ್ಯಾಸ ಪ್ರಮಾಣ ಪತ್ರಿಕೆ, ಪ್ರವೇಶ ಶುಲ್ಕ ಪಾವತಿ ಮಾಡಿದ್ದಕ್ಕೆ ರಶೀದಿ ಮತ್ತು ಗುರುತಿನ ಚೀಟಿಯ ಪ್ರತಿಗಳನ್ನು ಲಗತ್ತಿಸಬೇಕು. ಮೂಲ ಪ್ರತಿಗಳನ್ನು ಸಂದರ್ಶನ ಸಮಯದಲ್ಲಿ ತೋರಿಸತಕ್ಕದ್ದು. | |
| 7. ಕಳೆದ ಸಾಲಿನಲ್ಲಿ ವಿದ್ಯಾರ್ಥಿಯು ಮಾಡಿಕೊಂಡಿದ್ದ ಊಟ, ವಸತಿ, ಸೌಕರ್ಯಗಳ ವಿವರ. | |

| | |
|---|---|
| 8. ಕಳೆದ ಯಾವುದೇ ಸಾಲುಗಳಲ್ಲಿ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆದಿದ್ದ ವಿವರಗಳು | |
| 9. ವಿದ್ಯಾರ್ಥಿಯ ತಂದೆ / ತಾಯಿ ಪೋಷಕರು ಕೇಂದ್ರ ಸಂಘದ ಸದಸ್ಯರಾಗಿದ್ದಲ್ಲಿ ವಿವರಗಳು. (ಹಣ ಸಂದ ವಿವರ ಅಥವಾ ಗುರುತಿನ ಚೀಟಿಯ ನಕಲನ್ನು ಲಗತ್ತಿಸತಕ್ಕದ್ದು) | |

ನಾನು ಈ ಮೇಲ್ಕಂಡ ವಿವರಗಳನ್ನು ಸತ್ಯವೆಂದು ತಿಳಿದು, ಸತ್ಯವೆಂದು ನಂಬಿ ನಮೂದಿಸಿದ್ದೇನೆ. ಇತ್ತೀಚಿನ 3 ಭಾವಚಿತ್ರಗಳನ್ನು ಲಗತ್ತಿಸಿರುತ್ತೇನೆ.

ಸ್ಥಳ :

ಇಂತಿ ತಮ್ಮ ವಿಶ್ವಾಸ ಪಾತ್ರನಾದ

ತಾರೀಖು :

ವಿದ್ಯಾರ್ಥಿಯ ಸಹಿ

## ತಂದೆ / ತಾಯಿ / ಪೋಷಕರ ಪ್ರಮಾಣ ಪತ್ರಿಕೆ

ಈ ಅರ್ಜಿದಾರನಾದ ........................................................ನು ನನ್ನ ಮಗ / ತಮ್ಮ ..................................................ನಾಗಿದ್ದು (ಸರಿಯಾದ ಸಂಬಂಧ ತಿಳಿಸಬೇಕು). ನನ್ನ ರಕ್ಷಣೆಯಲ್ಲಿರುತ್ತಾನೆ. ಆತನು ಈ ಅರ್ಜಿಯಲ್ಲಿ ನೀಡಿರುವ ವಿವರಗಳು ಸತ್ಯವಾಗಿವೆ. ಈತನಿಗೆ ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾವಕಾಶ ನೀಡಬೇಕೆಂದು ವಿನಂತಿಸುತ್ತೇನೆ. ಆತನು ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಅದರ ನಿಬಂಧನೆಗಳಿಗೆ ವಿರುದ್ಧವಾಗಿ ವರ್ತಿಸಿದ್ದೇ ಆದಲ್ಲಿ ನನ್ನ ಗಮನಕ್ಕೆ ತಾರದೇ ನಿರ್ದಾಕ್ಷಿಣ್ಯವಾಗಿ ನಿಲಯದಿಂದ ಹೊರಹಾಕಬಹುದು.

ಆತನು ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಉಳಿಯುವಷ್ಟು ಅವಧಿಯಲ್ಲಿ ಒಳ್ಳೆಯ ನಡತೆಯಿಂದಿರುತ್ತಾನೆ. ಈತನಿಂದ ವಿದ್ಯಾರ್ಥಿ ನಿಲಯಕ್ಕೆ ಆಗಲಿ ಅಥವಾ ಮಾತೃ ಸಂಘಕ್ಕೆ ಆಗಲಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿರಲಿ ಯಾವುದೇ ವಿಧವಾದ ತೊಂದರೆ ಕಷ್ಟ-ನಷ್ಟಗಳುಂಟಾದಲ್ಲಿ ಅವುಗಳೆಲ್ಲಕ್ಕೂ ನಾನು ವಿದ್ಯಾರ್ಥಿಯೊಂದಿಗೆ ಜಂಟಿಯಾಗಿ ಬಾಧ್ಯನಾಗಿರುತ್ತೇನೆ, ಎಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ಸ್ಥಳ :

ದಿನಾಂಕ :

ತಂದೆ / ತಾಯಿ / ಪೋಷಕರ ಸಹಿ ಮತ್ತು ಹೆಸರು

## ಸ್ಥಳೀಯ ಸಂಘದ ಅಥವಾ ಆಯಾ ಸ್ಥಳಗಳಲ್ಲಿನ ಜನಾಂಗದ ಮುಖ್ಯರ ಪ್ರಮಾಣ ಪತ್ರಿಕೆ

ಈ ಅರ್ಜಿದಾರನಾದ ..................................................ನು ಶ್ರೀ .................................................ಯವರ ಮಗ/ತಮ್ಮ/ಸಂಬಂಧಿಕನಾಗಿದ್ದಾನೆ. ಈತನು ನನಗೆ ............................................ ವರ್ಷಗಳಿಂದ ಪರಿಚಿತನಾಗಿದ್ದಾನೆ. ಈತನು ಒಳ್ಳೆಯ ನಡತೆ ಮತ್ತು ಗುಣಶೀಲಗಳುಳ್ಳವನು. ಈತನಿಗೆ ಕೇಂದ್ರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶಾವಕಾಶ ಮಾಡಿಕೊಡಬೇಕೆಂದು ಶಿಫಾರಸ್ಸು ಮಾಡುತ್ತೇನೆ.

## ಕೇಂದ್ರ ಸಂಘದ ವಿಭಾಗದ ಪದಾಧಿಕಾರಿಗಳ ಶಿಫಾರಸ್ಸು ಕಡ್ಡಾಯ.

ಬೆಂಗಳೂರಿಗೆ ವಿದ್ಯಾಭ್ಯಾಸಕ್ಕೋಸ್ಕರವಾಗಿ ಬರುವ ವಿದ್ಯಾರ್ಥಿಗಳಿಗೆ ಒಂದು ಅವಧಿಗೆ, ಅಂದರೆ ಯಾವುದೇ ಒಂದೇ ಒಂದು ಕೋರ್ಸಿಗೆ ಮಾತ್ರ ಹಾಸ್ಟಲ್ ವ್ಯವಸ್ಥೆ ನೀಡಲಾಗುವುದು.

ಸಂಘದ ಮೊಹರು ...........................................

ದಿನಾಂಕ ...................................................

ಸ್ಥಳೀಯ / ಆಸುಪಾಸಿನ, ಕುರುಹಿನಶೆಟ್ಟಿ ಸಂಘದ
ಪದಾಧಿಕಾರಿಯ ಸಹಿ, ಹೆಸರು ಮತ್ತು ಸ್ಥಾನ

**ಇಪ್ಪತ್ತು ರೂಪಾಯಿ ಮೌಲ್ಯದ ದಸ್ತಾವೇಜು ಪತ್ರದ ಮೇಲೆ ಬರೆದು ಸಹಿ ಮಾಡಿ ಕೊಡತಕ್ಕದ್ದು.**
**ಸಂಘದ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆಯಲು ನೀಡಿರುವ ಪ್ರಮಾಣ ಪತ್ರ.**

ಈ ಕೆಳಗೆ ಸಹಿ ಮಾಡಿರುವ ..................................................ಆದ ನಾನು
......................................................ಸ್ಥಳದ
ಶ್ರೀ .......................................................ರವರ ಮಗ / ತಮ್ಮ.........................................................................
ಸಂಬಂಧವುಳ್ಳವನು, ಚಾಲ್ತಿ ಸಾಲಿನಲ್ಲಿ..................................................................................................................

ಕಾಲೇಜಿನಲ್ಲಿ....................................................................ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದೇನೆ. ಬೆಂಗಳೂರು ನಗರದಲ್ಲಿ
ಊಟ ವಸತಿಗಳಿಗೆ ಅನುಕೂಲವಿಲ್ಲದ ನನಗೆ ತಮ್ಮ ಕುರುಹಿನಶೆಟ್ಟಿ ಕೇಂದ್ರ ಸಂಘದ ಮೇಲ್ವಿಚಾರಣೆಯಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ನೀಡಿ, ನನ್ನ ವಿದ್ಯಾಭ್ಯಾಸಕ್ಕೆ ಅನುಕೂಲ ಒದಗಿಸಿ ಕೊಡಲಾಗಿದೆ. ನಾನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆಯಲಿಚ್ಛಿಸುತ್ತೇನೆ.

1. ವಿದ್ಯಾರ್ಥಿ ನಿಲಯದ ಸಮಿತಿಯ ಅಪ್ಪಣೆ ಇಲ್ಲದೆ ಅಥವಾ ಮೊದಲೇ ಮುನ್ಸೂಚನೆ ನೀಡದೇ ನಿಗದಿ ಪಡಿಸಿದ ಕೊಠಡಿಯಲ್ಲಿ ಉಳಿಯದೇ ಬೇರೆ ಕೊಠಡಿಗೆ ವಾಸ್ತವ್ಯವನ್ನು ಬದಲಾಯಿಸುವುದಿಲ್ಲ.

2. ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆಯುವ ಮುನ್ನ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿವೆಯೆಂದು ಪ್ರಮಾಣೀಕರಿಸುವುದಲ್ಲದೇ ನೀಡಿರುವ ಮಾಹಿತಿ ತಪ್ಪಾಗಿದ್ದರೆ ವಿದ್ಯಾರ್ಥಿ ನಿಲಯದ ಸಮಿತಿ ತೆಗೆದುಕೊಳ್ಳುವ ಎಲ್ಲಾ ಶಿಸ್ತು ಕ್ರಮಕ್ಕೆ ಬದ್ದನಾಗಿರುತ್ತೇನೆ.

3. ಪ್ರವೇಶ ಪಡೆಯುವ ವೇಳೆ 2,000 ರೂಪಾಯಿಗಳನ್ನು ಕಟ್ಟಡ ನಿಧಿಗೆ ನೀಡಲು ಒಪ್ಪಿರುತ್ತೇನೆ. ಇದು ಒಂದು ಸಾರಿಗೆ ನೀಡುವ ಹಣವಾಗಿದೆಯೆಂದು ಮತ್ತು ಇದು ಮರು ಸಂದಾಯವಾಗದ ಹಣವಾಗಿದೆ ಎಂದು ತಿಳಿದುಕೊಂಡಿರುತ್ತೇನೆ.

4. ಪ್ರತಿ ಸಾಲಿನಲ್ಲಿ 2,000 ರೂಪಾಯಿಗಳನ್ನು ನಿರ್ವಹಣಾ ವೆಚ್ಚಕ್ಕಾಗಿ ನೀಡಲು ಒಪ್ಪಿರುತ್ತೇನೆ. ಇದು ಮರು ಸಂದಾಯವಾಗದ ಹಣವಾಗಿದೆ ಎಂದು ತಿಳಿದುಕೊಂಡಿರುತ್ತೇನೆ.

5. ಪ್ರವೇಶ ಪಡೆಯುವ ವೇಳೆ 2,000 ರೂಪಾಯಿಗಳನ್ನು ಎಚ್ಚರಿಗೆ ಹಣ (ಕಾಷನ್ ಡಿಪಾಸಿಟ್)ವಾಗಿ ನೀಡಲು ಒಪ್ಪಿರುತ್ತೇನೆ.

6. ನಾನು ವಿದ್ಯಾರ್ಥಿ ನಿಲಯದ ಸುವ್ಯವಸ್ಥೆಗಾಗಿ ಸಂಘವು ಸೂಚಿಸಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಂಡಿದ್ದೇನೆ. ಚಾಲ್ತಿಯಲ್ಲಿರುವ ನಿಯಮ ನಿಬಂಧನೆಗಳ ನಕಲೊಂದಕ್ಕೆ ನನ್ನ ಮತ್ತು ನನ್ನ ತಂದೆ /ತಾಯಿ/ಪೋಷಕರ ಸಹಿ ಹಾಕಿಸಿ ನನ್ನ ಅರ್ಜಿಯೊಂದಿಗೆ ಲಗತ್ತಿಸಿದ್ದೇನೆ. ಈ ನಿಯಮ ನಿಬಂಧನೆಗಳಿಗೆ ಅಲ್ಲದೆ ಕಾಲಾನುಕ್ರಮದಲ್ಲಿ ತಮ್ಮ ಸಂಘವು ವಿದ್ಯಾರ್ಥಿ ನಿಲಯದ ಆಡಳಿತಕ್ಕಾಗಿ ಮುಂದೆ ಮಾಡಬಹುದಾದ ತಿದ್ದುಪಡಿ ಅಥವಾ ಹೊಸ ನಿಯಮ ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆ.

7. ವಿದ್ಯಾರ್ಥಿ ನಿಲಯದಲ್ಲಿ ಒದಗಿಸಿರುವ ಯಾವುದೇ ಪದಾರ್ಥಗಳಿಗೆ (ವಸ್ತು) ಧಕ್ಕೆ ಮಾಡಿದರೆ ಅದಕೆ ತಗಲುವ ವೆಚ್ಚವನ್ನು ಭರಿಸಲು ಒಪ್ಪಿರುತ್ತೇನೆ. ಇದಕ್ಕೆ ತಪ್ಪಿದಲ್ಲಿ ನಿಯಮಾನುಸಾರ ಕ್ರಮ ಜರುಗಿಸಬಹುದಾಗಿದೆ.

8. ವಿದ್ಯಾರ್ಥಿ ನಿಲಯದ ಆಡಳಿತ ವರ್ಗದವರು, ಕೇಂದ್ರ ಸಂಘದ ಅಧಿಕಾರಿ ವರ್ಗಕ್ಕೆ ವಿಧೇಯನಾಗಿ, ವಿದ್ಯಾರ್ಥಿ ನಿಲಯದ ಸಹಪಾಠಿಗಳೊಂದಿಗೆ ಮತ್ತು ಸಂಘದ ನೌಕರ ಸಿಬ್ಬಂದಿಯೊಂದಿಗೆ ಸಹಕಾರಿಯಾಗಿ ವರ್ತಿಸುತ್ತೇನೆ. ನನ್ನಿಂದೇನಾದರೂ ಅಸಭ್ಯತೆ, ಅವಿಧೇಯತೆ, ನಿಯಮೋಲ್ಲಂಘನೆ ಕಂಡು ಬಂದ ಕೂಡಲೇ ನನ್ನ ಮೇಲೆ ಕ್ರಮ ಜರುಗಿಸಲು ವಿದ್ಯಾರ್ಥಿ ನಿಲಯದ ಉಪಸಮಿತಿಯವರಿಗೆ ಅಥವಾ ಸಂಘದ ಅಧಿಕಾರಿಗಳಿಗೆ ಹಕ್ಕಿದೆ ಎಂದು, ಈ ಸಂಬಂಧದಲ್ಲಿ ಉಪಸಮಿತಿಯ ತೀರ್ಮಾನವೇ ಅಂತಿಮ ಎಂದು ಅದಕ್ಕೆ ಸಂಪೂರ್ಣ ಬದ್ಧನಾಗಿರುತ್ತೇನೆ, ಎಂದು ಒಪ್ಪಿ ನನ್ನ ಸ್ವ ಇಚ್ಛೆಯಿಂದ ಸಹಿ ಮಾಡಿರುತ್ತೇನೆ.

9. ವಿದ್ಯಾರ್ಥಿ ನಿಲಯದ ವಸತಿ ಸೌಲಭ್ಯ ಪಡೆದು ವಿದ್ಯಾಭ್ಯಾಸ ಮುಗಿಸಿ, ಉದ್ಯೋಗಸ್ಥನಾದ ಮೇಲೆ ಕುರುಹಿನಶೆಟ್ಟಿ ವಿದ್ಯಾರ್ಥಿ ನಿಲಯಕ್ಕೆ ಸಾಧ್ಯವಾದ ಎಲ್ಲಾ ಅರ್ಥಿಕ ಸಹಾಯ ಮಾಡುತ್ತೇನೆಂದು ಪ್ರಮಾಣೀಕರಿಸುತ್ತೇನೆ.

10. ಲಿಖಿತವಾಗಿ ಪೂರ್ವಾನುಮತಿಯಿಲ್ಲದೆ ಯಾರೇ ಸಂಬಂಧಕರು ಅಥವಾ (ಪೋಷಕರನ್ನು ಹೊರತುಪಡಿಸಿ) ಸ್ನೇಹಿತರು, ಅನಾಮಧೇಯರು ಬಂದಲ್ಲಿ (ಸಂಘಕ್ಕೆ ತಿಳಿಸದೆ) ಕೊಠಡಿಗೆ ಸೇರಿಸಿದ ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಮತ್ತು ಹೊರಹಾಕಲಾಗುವುದು.

ವಿದ್ಯಾರ್ಥಿ ಸಹಿ, ಮತ್ತು ಪೂರ್ಣ ವಿಳಾಸ,

ಸಾಕ್ಷಿಗಳು :

1) ವಿದ್ಯಾರ್ಥಿಯ ತಂದೆ / ತಾಯಿ / ಪೋಷಕರ ಸಹಿ ಮತ್ತು ವಿಳಾಸ

2) ಸ್ಥಳೀಯ ಸಂಘದ ಅಥವಾ ಆಸುಪಾಸಿನ ಸ್ಥಳದ ಸಂಘದ
ಪದಾಧಿಕಾರಿ ಅಥವಾ ಸಂಘದ ಇಬ್ಬರು ಗಣ್ಯರ ಸಹಿ ಮತ್ತು ವಿಳಾಸ
ಹಾಗೂ ಮೊಹರು ಅತ್ಯಗತ್ಯ.

ಸಾಕ್ಷಿದಾರರಾಗಿ ಗಣ್ಯ ಮಾನ್ಯರು

1) 2)



॥ ಶ್ರೀ ನೀಲಕಂಠೇಶ್ವರ ಸ್ವಾಮಿ ಪ್ರಸನ್ನ॥

# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ.)

ನಂ. 5, 'ಸಾಕಮ್ಮ ಭವನ', ದ್ವಾರಕಾನಾಥ್ ರಸ್ತೆ, ಹೊಸ ಪ್ರೌಢಶಾಲೆ ರಸ್ತೆ,
ವಿಶ್ವೇಶ್ವರಪುರ, ಬೆಂಗಳೂರು - 560 004. ದೂರವಾಣಿ : 080 - 22425746
E-mail : ksksanga@gmail.com www.ksksangha.com



## ವಿದ್ಯಾರ್ಥಿ ನಿಲಯದಲ್ಲಿನ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮ ನಿಬಂಧನೆಗಳು

1. ಚಾಲ್ತಿ ಸಾಲಿನಲ್ಲಿ ಪ್ರವೇಶಾವಕಾಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ನಿಲಯದಲ್ಲಿ ಉಳಿಯಲು ಅನುಮತಿ ಇರುತ್ತದೆ.

2. ಪ್ರವೇಶಾವಕಾಶ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಂಬಂಧಪಟ್ಟ ಉಪಸಮಿತಿಯು ಕಾಲಕಾಲಕ್ಕೆ ನಿಗದಿಪಡಿಸುವ ಮುಂಗಡ ಮತ್ತು ಮುಂಜಾಗ್ರತಾ ಹಣವನ್ನು ಸಲ್ಲಿಸಿ, ನಿರ್ವಹಣಾಧಿಕಾರಿಗಳ ಅನುಮತಿ ಪಡೆದು ಅವರು ನಿಗದಿಪಡಿಸಿದ ಕೊಠಡಿಯಲ್ಲಿ ಉಳಿಯತಕ್ಕದ್ದು.

   ಅ) ಸದರಿ ಮುಂಗಡ ಹಣ ಮತ್ತು ಅಥವಾ ಮುಂಜಾಗ್ರತಾ ಹಣವನ್ನು ವಿದ್ಯಾರ್ಥಿಯ ನಡವಳಿಕೆಗಳ ಆಧಾರದ ಮೇಲೆ ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಹಿಂದಿರುಗಿಸಲು ನಿರ್ವಹಣಾಧಿಕಾರಿಯವರಿಗೆ ಹಕ್ಕಿರುತ್ತದೆ.

   ಆ) ನಿರ್ವಹಣಾಧಿಕಾರಿಯವರು ನಿಗದಿ ಪಡಿಸಿದ ಕೊಠಡಿಯಲ್ಲಲ್ಲದೇ ಬೇರೆ ಕೊಠಡಿಗೆ ಪೂರ್ವಾನುಮತಿ ಇಲ್ಲದೆ ವಿದ್ಯಾರ್ಥಿಯು ಯಾವ ಕಾರಣದಿಂದಲೂ ಬದಲಾಯಿಸಕೂಡದು.

3. ವಿದ್ಯಾರ್ಥಿ ನಿಲಯಕ್ಕೆ ಪ್ರತ್ಯೇಕವಾಗಿ ವಿದ್ಯುತ್ ಸರಬರಾಜು ವ್ಯವಸ್ಥೆ ಇದ್ದು ಇಲಾಖೆಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ವಿದ್ಯುತ್ ವೆಚ್ಚದ ಹಣವನ್ನು ಸದರಿ ವ್ಯವಸ್ಥೆಯ ದುರಸ್ತಿ ಹಣವನ್ನು ವಿದ್ಯಾರ್ಥಿಗಳೇ ಭರಿಸತಕ್ಕದ್ದು. ಇಲಾಖೆಗೆ ಬಾಕಿಯಾಗಿ ಸಲ್ಲಿಸಿದ ಹಣದ ರಶೀದಿಯನ್ನು ಸಂಘದ ಕಛೇರಿಗೆ ತಪ್ಪದೇ ತಲುಪಿಸತಕ್ಕದ್ದು.

   ಅ) ಕಾಲಕಾಲಕ್ಕೆ ಇಲಾಖೆಗೆ ಸಲ್ಲಿಸಬೇಕಾದ ವಿದ್ಯುತ್ ವೆಚ್ಚದ ಹಣವನ್ನು ಸಲ್ಲಸದೇ ಇದ್ದುದರಿಂದಾಗಲೀ ಅಥವಾ ಬೇರಾವ ಕಾರಣದಿಂದಾಗಲೀ ವಿದ್ಯುತ್ ಸರಬರಾಜು ನಿಂತಲ್ಲಿ ಸಂಘದವರು ಜವಾಬ್ದಾರರಾಗಲಿಕ್ಕಿಲ್ಲ. ಅಂತಹ ತೊಂದರೆಗಳನ್ನು ವಿದ್ಯಾರ್ಥಿಗಳೇ ತಮ್ಮ ಸ್ವಂತ ಜವಾಬ್ದಾರಿಯಿಂದ ಸರಿಪಡಿಸಿಕೊಳ್ಳತಕ್ಕದ್ದು.

4. ಸಂಬಂಧಪಟ್ಟ ಉಪಸಮಿತಯವರು ನಿಗದಿಪಡಿಸಿದಂತೆ ನೀರಿನ ವೆಚ್ಚದ ಹಣವನ್ನು ಪ್ರತ್ಯೇಕವಾಗಿ ಅಥವಾ ವಿದ್ಯಾರ್ಥಿಗಳು ಪ್ರತಿ ತಿಂಗಳೂ ಊಟದ ಹಣವನ್ನು ಸಲ್ಲಿಸುವುದರ ಜೊತೆಗೆ ನಿರ್ವಹಣಾಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸಿ, ಪ್ರತ್ಯೇಕ ರಶೀದಿ ಪಡೆಯತಕ್ಕದ್ದು.

5. ಪ್ರತಿ ತಿಂಗಳು ವಿದ್ಯಾರ್ಥಿಗಳು ಊಟದ, ನೀರಿನ ಮತ್ತು ಇತರ ಬಾಬ್ತುಗಳಿಗೆ ತಗಲುವ ವಚ್ಚವನ್ನು ಆಯಾ ತಿಂಗಳದ ಮುಂದಿನ ತಿಂಗಳ 5ನೇ ತಾರೀಖಿನಂದು ತಪ್ಪದೇ ನಿರ್ವಹಣಾಧಿಕಾರಿಯವರಿಗಾಗಲಿ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸತಕ್ಕದ್ದು.

   ಅ) ವಿದ್ಯಾರ್ಥಿಯ ಮುಂಗಡ ಮತ್ತು ಮುಂಜಾಗ್ರತೆ ಹಣದಿಂದ ಅವನಿಂದ ಬರಬೇಕಾದ ಊಟದ ಹಣ, ವಿದ್ಯುತ್ ವೆಚ್ಚದ ಹಣ, ನೀರಿನ ಹಣ ಮತ್ತು ಇತರ ಬಾಬ್ತುಗಳ ಹಣವನ್ನು ಮುರಿದುಕೊಂಡು, ವಿದ್ಯಾರ್ಥಿ ನಿಲಯಕ್ಕೆ ಸಂಬಂಧಪಟ್ಟ ಇತರ ವ್ಯವಹಾರಗಳನ್ನು (ಅಂದರೆ ವಿದ್ಯಾರ್ಥಿ ನಿಲಯದ ಪುಸ್ತಕ ಭಂಡಾರದಿಂದ ಪಡೆದ ಪುಸ್ತಕಗಳನ್ನು ವಾಪಸ್ಸು ನೀಡುವುದು ಇತ್ಯಾದಿ) ಸಂಪೂರ್ಣಗೊಳಿಸಿ ವಿದ್ಯಾರ್ಥಿನಿಲಯದ ಹೊರಗೆ ಹಾಕಲು, ಹೆಚ್ಚಾದ ಬಾಕಿ ಹಣವನ್ನು ವಿದ್ಯಾರ್ಥಿಯ ತಂದೆಯ ಪೋಷಕರಿಂದ ವಸೂಲಿ ಮಾಡುವ ಪೂರ್ಣ ಅಧಿಕಾರವು ನಿರ್ವಹಣಾದಿಕಾರಿಗೆ ಇರುತ್ತದೆ.

ಆ) ಇಂತಹ ಪ್ರಸಂಗಗಳನ್ನು ಆಯಾ ತಿಂಗಳ 15ನೇ ತಾರೀಖಿಗೆ ಮುಂದಾಗಿಯೇ ನಿರ್ವಹಣಾಧಿಕಾರಿಯವರ ಸಂಘದ ಪದಾಧಿಕಾರಿಗಳ ಗಮನಕ್ಕೆ ತಪ್ಪದೇ ತರತಕ್ಕದ್ದು.

6. ಪ್ರತಿದಿನ ಪ್ರಾತಃಕಾಲ 6 ಗಂಟೆಗೆ ಮತ್ತು ಸಂಜೆ 7 ಗಂಟೆಗೆ ನಿರ್ವಹಣೆ ಅಧಿಕಾರಿಗಳಿಂದ ನಿರ್ಧರಿಸಲ್ಪಟ್ಟ ಸ್ಥಳದಲ್ಲಿ ವಿದ್ಯಾರ್ಥಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡತಕ್ಕದ್ದು.

7. ವಿದ್ಯಾರ್ಥಿ ನಿಲಯದ ಕೊಠಡಿಗಳು, ಅಡುಗೆ ಮನೆ, ಊಟದ ಮನೆ, ಸ್ನಾನ-ಶೌಚಾದಿ ಕೊಠಡಿಗಳು ಮತ್ತಿತರ ಸ್ಥಳಗಳು ನಿರ್ವಹಣಾಧಿಕಾರಿಗಳ ಹಾಗೂ ಸಂಘದ ಇತರ ಪದಾಧಿಕಾರಿಗಳ ನೇರ ಉಸ್ತುವಾರಿಗೆ ಸೇರಿರುತ್ತದೆ. ಸದರಿ ಅಧಿಕಾರಿಗಳು ಯಾವ ಮುನ್ಸೂಚನೆಯನ್ನು ಕೊಡದೇ ಈ ಸ್ಥಳಗಳನ್ನು ಪ್ರವೇಶಿಸಿ, ಪರಿಶೀಲಿಸಬಹುದು. ದೋಷ ಕಂಡು ಬಂದಲ್ಲಿ ನಿರ್ವಹಣಾಧಿಕಾರಿಯವರಿಗೆ ನೇರವಾಗಿ ಅಥವಾ ಸಂಘದ ಪದಾಧಿಕಾರಿಗಳಿಗೆ ನಿರ್ವಹಣಾಧಿಕಾರಿಯವರ ಮೂಲಕವಾಗ ಕ್ರಮ ಜರುಗಿಸಲು ಸಂಪೂರ್ಣ ಅಧಿಕಾರವಿರುವುದು.

8. ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯದ ಯಾವುದೇ ಆಸ್ತಿಪಾಸ್ತಿ ವಸ್ತುಗಳಿಗೆ ಗೆರೆ ಹಾಕುವುದು, ಮೊಳೆ ಹೊಡೆಯುವುದು, ಹೆಸರು ಕೆತ್ತುವುದು.... ಇತ್ಯಾದಿಗಳನ್ನು ಮಾಡುವ ಮೂಲಕ ಜಖಂ ಮಾಡಬಾರದು. ಮಾಡಿದ್ದು ಕಂಡು ಬಂದ ಸಮಯದಲ್ಲಿ ವಿಚಾರಣೆ ನಡೆಸಿ, ಸಂಬಂಧಪಟ್ಟವರಿಗೆ ಶಿಕ್ಷೆ ನೀಡಲು ನಿರ್ವಹಣಾಧಿಕಾರಿಯವರಿಗೆ ಅಧಿಕಾರವಿರುವುದು.

9. ವಿದ್ಯಾರ್ಥಿ ನಿಲಯದಲ್ಲಿ ಇಸ್ಪೀಟು ಮುಂತಾ ಜೂಜಾಟ, ಪ್ರಚೋದಕ ಆಟಗಳಿಗೆ, ಧೂಮಪಾನ, ಮದ್ಯಪಾನಾದಿ ದುಶ್ಚಟಗಳಿಗೆ ಅವಕಾಶವಿರುವುದಿಲ್ಲ, ಸಂಪೂರ್ಣವಾಗಿ ಬಹಿಷ್ಕರಿಸಲಾಗಿದೆ. ಒಂದು ವೇಳೆ ಇಂತಹ ದುಷ್ಕೃತ್ಯಗಳು ಕಂಡು ಬಂದಲ್ಲಿ ಸಂಬಂಧಪಟ್ಟವರನ್ನು ದಂಡನೆಗೆ ಒಳಪಡಿಸಲು ನಿರ್ವಹಣಾಧಿಕಾರಿಯವರಿಗೆ ಪೂರ್ಣ ಅಧಿಕಾರವಿರುವುದು.

10. ನಿರ್ವಹಣಾಧಿಕಾರಿಯವರ ಅಪ್ಪಣೆ ಇಲ್ಲದೇ ರಾತ್ರ 10-00 ಗಂಟೆ ನಂತರ ವಿದ್ಯಾರ್ಥಿ ನಿಲಯದ ಹೊರಗೆ ಉಳಿಯ ಕೂಡದು.

11. ವಿದ್ಯಾರ್ಥಿಯನ್ನು ನೋಡಲು, ವಿಚಾರಿಸಲು ಬರುವ ಆತನ ತಂದೆ/ತಾಯಿ/ಪೋಷಕರಿಗೆ ನಿರ್ವಹಣಾಧಿಕಾರಿಯವರ ಅನುಮತಿ ಪಡೆದು ಅತಿಥಿಗಳ ಕೊಠಡಿಯು ತೆರವಾಗಿದ್ದರೆ, ಅದರಲ್ಲಿ ಉಳಿಯಲು ಅವಕಾಶವುಂಟು.

12. ವಿದ್ಯಾರ್ಥಿಯು ವಿದ್ಯಾರ್ಥಿನಿಲಯಕ್ಕೆ ಸಂಬಂಧಪಟ್ಟ ಎಲ್ಲಾ ಕೊಡುವ ತೆಗೆದುಕೊಳ್ಳುವ ವ್ಯವಹಾರಗಳನ್ನು ಮುಗಿಸಿ, ನಿರ್ವಹಣಾಧಿಕಾರಿಯವರ ಅನುಮತಿ ಪಡೆದು ವಿದ್ಯಾರ್ಥಿ ನಿಲಯವನ್ನು ಬಿಡತಕ್ಕದ್ದು. ನಿಯಮ ತೊರೆದು ಹೋದ ವಿದ್ಯಾರ್ಥಿ, ವಿದ್ಯಾರ್ಥಿ ನಿಲಯದ ಖರ್ಚು ವೆಚ್ಚಗಳನ್ನು ಸಮಭಾಗವಾಗಿ ಆತನ ಮುಂಗಡ ಮುಂಜಾಗ್ರತಾ ಹಣದಿಂದ ಮುರಿದುಕೊಂಡು, ಮಿಕ್ಕ ಹಣವನ್ನು ವಾಪಸ್ಸು ಮಾಡತಕ್ಕದ್ದು. ಸದರಿ ಖರ್ಚು ವೆಚ್ಚಗಳು ಮುಂಜಾಗ್ರತಾ ಮತ್ತು ಮುಂಗಡ ಹಣಕ್ಕೆ ಮೀರಿದ ಸಂದರ್ಭದಲ್ಲಿ ಅಂತಹ ಹಣವನ್ನು ಸಂಬಂಧಪಟ್ಟ ವಿದ್ಯಾರ್ಥಿಯ ತಂದೆ / ತಾಯಿ ಪೋಷಕರಿಂದ ವಸೂಲಿ ಮಾಡಲು ನಿರ್ವಹಣಾಧಿಕಾರಿಯವರಿಗೆ ಹಕ್ಕಿರುತ್ತದೆ.

13. ವಿದ್ಯಾರ್ಥಿಯು ನಿರ್ವಹಣಾಧಿಕಾರಿಯವರಿಗೆ ವಿಧೇಯನಾಗಿದ್ದು ತನ್ನ ಅಹವಾಲುಗಳಿದ್ದರೆ ನಿರ್ವಹಣಾಧಿಕಾರಿಯವರ ಮೂಲಕ ಸಂಬಂಧಪಟ್ಟ ಉಪಸಮಿತಿಯ ಕಾರ್ಯಾಧ್ಯಕ್ಷರಿಗೆ ಸಲ್ಲಿಸಿ, ಅವರ ತೀರ್ಮಾನದಂತೆ ನಡೆದುಕೊಳ್ಳಬೇಕು.

14. ಇಲ್ಲಿ ನಮೂದಿತವಾಗಿಲ್ಲದ ಯಾವುದೇ ವಿವಾದದಲ್ಲಿ ವಿದ್ಯಾರ್ಥಿನಿಲಯದ ಉಪಸಮಿತಿಯ ತೀರ್ಮಾನವನ್ನು ಗೌರವಿಸಲಾಗುವುದು.

ವಿದ್ಯಾರ್ಥಿಯ ತಂದೆ / ತಾಯಿ / ಪೋಷಕರ ಸಹಿ ಹಾಗೂ ಹೆಸರು                    ವಿದ್ಯಾರ್ಥಿಯ ಸಹಿ ಹಾಗೂ ಹೆಸರು

# ಅಭ್ಯರ್ಥಿಯು ಗಮನಿಸಬೇಕಾದ ಅಂಶಗಳು, ಸೂಚನೆಗಳು

1. ಅರ್ಜಿಯನ್ನು ಸ್ಪುಟವಾದ ಅಕ್ಷರಗಳಲ್ಲಿ ಭರ್ತಿ ಮಾಡಬೇಕು.

2. ವಿದ್ಯಾರ್ಥಿಯ ವಾಸ ಸ್ಥಳದಲ್ಲಿ ಕುರುಹಿನಶೆಟ್ಟಿ ಸಂಘವಿಲ್ಲದಿದ್ದಲ್ಲಿ ಆ ಸ್ಥಳದ ಆಸುಪಾಸಿನ ಸ್ಥಳದಲ್ಲಿನ ಸಂಘದ ವತಿಯಿಂದ ಕಡ್ಡಾಯವಾಗಿ ಶಿಫಾರಸ್ಸು ಪತ್ರ ಪಡೆಯತಕ್ಕದ್ದು. ಹತ್ತಿರದಲ್ಲಿ ಸಂಘಗಳು ಇಲ್ಲದ ಪಕ್ಷದಲ್ಲಿ ಕೇಂದ್ರ ಸಂಘದ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರೊಬ್ಬರಿಂದಲಾದರೂ ಶಿಫಾರಸ್ಸು ಮಾಡಿಸಬಹುದು. ಈ ಸದಸ್ಯರೂ ಸಿಗದ ಪಕ್ಷದಲ್ಲಿ ವಿದ್ಯಾರ್ಥಿಯ ಸ್ಥಳದಲ್ಲಿನ ಕುರುಹಿನಶೆಟ್ಟಿ ಸಮಾಜದ ಮುಖ್ಯಸ್ಥರಿಂದ ಶಿಫಾರಸ್ಸು ಮಾಡಿಸಿ, ಅವರ ಪೂರ್ಣ ವಿಳಾಸವನ್ನು ನಮೂದಿಸತಕ್ಕದ್ದು.

3. ಅರ್ಜಿಯ ಪ್ರತಿಯೊಂದು ಕಾಲಂಗಳನ್ನು ತಪ್ಪದೇ ಭರ್ತಿ ಮಾಡಬೇಕು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

4. ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ನೀಡುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕು ಸಂಬಂಧಪಟ್ಟ ಉಪಸಮಿತಿಯದ್ದಾಗಿರುತ್ತದೆ.

5. ಸ್ವವಿಳಾಸ ಬರೆದ ಅಂಚೆ ಚೀಟಿ ಅಚಿಟಿಸಿದ ಲಕೋಟೆ(ಕವರ್)ಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಕಳುಹಿಸುವುದು.

6. ಅರ್ಜಿಯೊಂದಿಗೆ ಲಗತ್ತಿಸಿರುವ ನಿಯಮ ನಿಬಂಧನೆಗಳು 2 ಪ್ರತಿಗಳಲ್ಲಿ ಒಂದಕ್ಕೆ ವಿದ್ಯಾರ್ಥಿ ಮತ್ತು ಆತನ ತಂದೆ / ತಾಯಿ / ಪೋಷಕರು ಸಹಿ ಮಾಡಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸಿ ರವಾನಿಸಬೇಕು.

# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ.)

ನಂ. 5, 'ಸಾಕಮ್ಮ ಭವನ', ದ್ವಾರಕಾನಾಥ್ ರಸ್ತೆ, ಹೊಸ ಪ್ರೌಢಶಾಲೆ ರಸ್ತೆ,
ವಿಶ್ವೇಶ್ವರಪುರ, ಬೆಂಗಳೂರು – 560 004. ದೂರವಾಣಿ : 080 – 22425746
E-mail : ksksanga@gmail.com www.ksksangha.com


# ಮುಂಜಾಗ್ರತಾ ಹಣ

ದಿನಾಂಕ : ..................................

ಹೆಸರು ಮತ್ತು ವಿಳಾಸ ..........................................................................................

..........................................................................................................

..........................................................................................................

ದಿನಾಂಕ ...................................................... ರಂದು ನಾನು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆಯುವಾಗ ರೂ. 2,000–00 (ಎರಡು ಸಾವಿರ ಮಾತ್ರ) ಮುಂಜಾಗ್ರತಾ ಹಣವಾಗಿ ನೀಡಿರುತ್ತೇನೆ. ಇಂದು ......................................................ವಿದ್ಯಾರ್ಥಿ ನಿಲಯವನ್ನು ಬಿಡುವವನಿದ್ದೇನೆ. ವಿದ್ಯಾರ್ಥಿ ನಿಲಯದಲ್ಲಿ...................................................... ವರ್ಷ ನನಗೆ ಆಶ್ರಯ ನೀಡಿ ನೋಡಿಕೊಂಡಿರುತ್ತೀರಿ. ಈ ಹಣವನ್ನು ವಿದ್ಯಾರ್ಥಿ ನಿಲಯದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಿರೆಂದು ಈ ಮೂಲಕ ನನ್ನ ಒಪ್ಪಿಗೆಯನ್ನು ಕೊಟ್ಟಿರುತ್ತೇನೆ.

(ಸಹಿ)

ರಶೀದಿ ಸಂಖ್ಯೆ : ......................................................

ದಿನಾಂಕ : ............................................................